

ಅಲ್ಲಿ ತಳಸಮುದಾಯದವರೇ ಹೆಚ್ಚಾಗಿದ್ದರು; ಅಗಸರು, ಗೊಲ್ಲರು, ಮುಸ್ಲಿಮರು ಹೀಗೆ. ಸಿಡಿ ಉತ್ಸವಗಳಲ್ಲಿ ಬಯಲು ನಾಟಕಗಳನ್ನು ಆಡುತ್ತಿದ್ದರು. ಜಾತ್ರೆಗಳು ಜರುಗುತ್ತಿದ್ದವು. ಬೆಳಗಿನವರೆಗೆ ನಾಟಕಗಳನ್ನು ನೋಡುತ್ತಿದ್ದೆ, ಅವನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದೆ. ಕಲಾವಿದರ ಬೇಗುದಿಗಳೂ ಅರಿವಾಗುತ್ತಿದ್ದವು. ಖುದ್ದು ನಮ್ಮ ಮನೆಯಲ್ಲೂ ಬಡತನ. ನನ್ನ ತಂದೆ ನಾಟಕಕಾರರು. ಅವರು ತಮ್ಮ ಲೋಲುಪ ಖರ್ಚುಗಳನ್ನೆಲ್ಲ ಕಳೆದುಕೊಂಡು, ಮನೆಗೆ ಹಣ ಕಳುಹಿಸುತ್ತಿದ್ದರು. ಅಕಸ್ಮಾತ್ತಾಗಿ ಒಮ್ಮೆ ಹಿರಣ್ಣಯ್ಯನವರ ಕಂಪನಿಯ ನಾಟಕವೊಂದರಲ್ಲಿ ಒಂದು ಪಾತ್ರವನ್ನೂ ಮಾಡಿದ್ದೆ. ನನ್ನ ತಾಯಿಗೆ ನಾಟಕ–ಸಿನಿಮಾ ಅಂದರೆ ಆಗುತ್ತಿರಲಿಲ್ಲ. ನಾನು ಚೆನ್ನಾಗಿ ಓದಬೇಕು ಎಂದು ಬಯಸಿದರು. ಆರೋಗ್ಯ ಇಲಾಖೆಯಲ್ಲಿ ನಾನು ಕೆಲಸ ಸಿಕ್ಕ ಮೇಲೆ ಯಾವ ಕಾರಣಕ್ಕೂ ಅದನ್ನು ಬಿಡಕೂಡದು ಎಂದೇ ಪಟ್ಟಾಗಿ ಇದ್ದುಬಿಟ್ಟೆ. ರಜಾ ದಿನಗಳಲ್ಲಿ ಸಿನಿಮಾ ಚರ್ಚೆಗೆ ಹೋಗುತ್ತಿದ್ದೆ. ನಿತ್ಯ ಸಂಜೆ ಆರರಿಂದ ನಡುರಾತ್ರಿಯವರೆಗೆ ಬರವಣಿಗೆಗೆ ಸಮಯ ನೀಡುತ್ತಾ ಬಂದೆ. ಬರಹಗಾರನಾಗಿ ಅಷ್ಟೇ ಉಳಿಯಬೇಕು ಎನ್ನುವುದು ನನ್ನ ಸಂಕಲ್ಪವಾಗಿತ್ತು.

◆ **ವೃತ್ತಿಯಿಂದ ಬರವಣಿಗೆಗೆ ಆದ ಲಾಭವೇನು?**

ನನಗೆ ಮೊದಲು ಕಲಬುರಗಿಗೆ ಪೋಸ್ಟಿಂಗ್ ಆಯಿತು. ಅಲ್ಲಿ ಮುಸ್ಲಿಮರು ನನ್ನನ್ನು ಚೆನ್ನಾಗಿ